ಸೇತುಭಂಗ

ಗೋಪಾಲಕೃಷ್ಣ ಪಾಲೆಪ್ಪಾಡಿ.

ಸೇತುಭಂಗ

ಗೋಪಾಲಕೃಷ್ಣ ಪಾಲೆಪ್ಪಾಡಿ
ಸೈಂಟ್ ಆಗ್ನೇಸ್ ಕಾಲೇಜು
ಮಂಗಳೂರು, ದ. ಕ.

1950. ಎಂಟಾಣೆ.

ನೆನಹು

ತೊಟ್ಟಿಲಲಿ ಪಟ್ಟಿರಲು ನಿನ್ನ ನಾಂ ಮರೆತಂದು
ಬಿಟ್ಟುಹೋದ್ಯೆ ತಂದೆ! ತೊದಲುಲಿವ ಮುನ್ನ,
ಪಟ್ಟಾಗ ತೊಟ್ಟಾಗ ನಡೆವಾಗ ನುಡಿವಾಗ
ನಿಟ್ಟೆಯಿಂ ನೆನೆಯುತಿದೆ ನಿನ್ನ, ಮನವೆನ್ನ!

ಉಷೆಯೆದ್ದು ಬರುವಾಗ, ನಿಶೆಯು ಕಾಲಿಡುವಾಗ,–
ನುಸುಳಿ ಕಣ್ಮರೆಯಾದ ನೀನು,– ಮನವಾರೆ
ಹಸುಗೂಸು ನಾಂ ನುಡಿವ ತೊದಲುಲಿಯನಾಲಿಸಲು
ಹಸನಾದ ಬಯಕೆಯಿಂದೇಕಿನ್ನು ಬಾರೆ?

ಉದಯ ಪ್ರಿಂಟರಿ ಎಂಡ್ ಪಬ್ಲಿಕೇಶನ್ಸ್, ಲಿಮಿಟೆಡ್, ಮಂಗಳೂರು

ಮೊದಲುಲಿ

ಕಲಿಸಿದರು ಆಂಗ್ಲ ಸಾಹಿತ್ಯವನು ಬಾಲ್ಯದಲಿ
ಒಲಿಸಿಮನವಂ ಮೆಕೋಲೆಯಗೀತೆಯೊಂದ
ಬಳಿಕದನು ಕನ್ನಡಿಸಿ ಕವನದಲಿ ಹಾಡಿದೆನು
ಕಳೆದುವಬ್ದಂಗಳೀರೇಳಂದಿನಿಂದ. || ೧ ||

ರಸವೊಸರಲಿನಿತಾನುಮೀಕೃತಿಯೊಳದು ನೋಡಿ
ಬಸಿದಿರ್ಪುದಾಮೂಲ ಕಾವ್ಯದಿಂ ನಿಜದೆ!
ಕಸವಿದ್ದು ವಿರಸವಾಗಿದ್ದೆಡೆಯು ದೋಷಗಳು
ಪಸರಿಸಿದುವೆನ್ನಿಂದೆ ನುಡಿವೆ ಮುಚ್ಚಿಡದೆ! || ೨ ||

ದಾರಿಯೆನ್ನದು ತಪ್ಪೊ, ದಾರಿಯೆನ್ನದು ಒಪ್ಪೊ
ತೋರಲಾರದು ನೋಡಿ, ಎನ್ನಲ್ಪಮತಿಗೆ;
ತೋರಿದೊಡೆ ನಿಮಗೆ ಚಿರಋಣಿಯಾಗಿ ಬಾಳುವೆನು
ತೋರದೊಡೆ ಕುಂದೇನು ನನಗುಂಟೆ? ನಿಮಗೆ! || ೩ ||

ನಡೆವನೆಡಹುವನವನ ಕೈವಿಡಿದು ಕರುಣೆಯಿಂ
ನಡೆಸುವರು ಸಜ್ಜನರು ಬೇಡಬೇಕೇನು?
ಕಡೆಗಣಿಸಿ ಕೈತಟ್ಟಿ ಕೇಳ್ಗೈವ ಕೇಡುಗರ
ಸುಡುಮಾತಿನಿಂದೂಣೆಯುಂ ಬರುವುದೇನು? || ೪ ||

ಕನ್ನಡದೊಳೊಗೆತಂದು ಕನ್ನಡದ ಕೂಳುಂಡು
ಕನ್ನಡದ ತಂಪಾದ ತಿಳಿನೀರುಗುಡಿದು,
ಕನ್ನಡದ ಕಮ್ಮೆಲರನುಸಿರಾಡುತನುದಿನವು
ಕನ್ನಡಿಗನಾಗಿರುವೆನೀಯೊಡಲ ಪಡೆದು || ೫ ||

ಕನ್ನಡವೆ ತಾಯ್ನುಡಿಯು ಕನ್ನಡವೆ ಜೀವಿತವು
ಕನ್ನಡವೆ ಎನಗಿಹದೊಳ್ಳೈಸಿರಿಗಳೆಂಟು!
ಕನ್ನಡಮ್ಮನ ಸೇವೆಗೀಕಾಯ ಸವೆಯದಿರ
ಲಿನ್ನೇನು ಪುರುಷಾರ್ಥವೀ ಜನ್ಮದುಂಟು? ॥ ೬ ॥

ಬಲ್ಲವರಿಗಿಲ್ಲೇನು ಬೆರಗಿಲ್ಲವೆಂದರೂ
ಸೊಲ್ಲೊಂದು ಸವಿಯಾಗಿ ಮನಕಾದೊಡಿಷ್ಟ
ಉಲ್ಲಾಸವಾಗುವುದು; ಆಗದೊಡೆ ಹೋಗುವುದು
ಎಲ್ಲವೂ ನಿಮಗಲ್ತೆ! ನನಗೇನು ನಷ್ಟ? ॥ ೭ ॥

ಮರೆಯಲ್ಲೆ ಮುಚ್ಚಿಟ್ಟೆನಾತ್ಮಸಂತೋಷಕ್ಕೆ
ಬರೆದಿರುವ ಹಲವಾರು ಕಾವ್ಯಗಳನೊಂದಂ
ಸರಿಯಿರಲಿ ತಪ್ಪಿರಲಿ ಸಜ್ಜನರಿಗೊಪ್ಪಿಸುವೆ
ಹರುಷದಿಂಕೈಕೊಳ್ಳಿ! ಪರಿಹರಿಸಿ ಕುಂದಂ ॥ ೮ ॥

ಸೇತುಭಂಗ

ಸುಮಾರು 2200 ವರ್ಷಗಳ ಹಿಂದೆ ರೋಮ್ ನಗರವನ್ನು ಟರ್ಕ್ವಿನಿಯು ಸ್ಸೆಂಬ ಅರಸನು ಆಳುತ್ತಿದ್ದನು. ಆತನ ದುರ್ವರ್ತನೆಯಿಂದ ಪ್ರಜೆಗಳು ರೇಗಿ ಅವನನ್ನು ಸಿಂಹಾಸನದಿಂದ ತಳ್ಳಿಬಿಟ್ಟು ದೇಶಭ್ರಷ್ಟನನ್ನಾಗಿ ಮಾಡಿದರು. ಬಳಿಕ ತಮ್ಮೊಳಗೆ ಸಮರ್ಥನಾದೊಬ್ಬನನ್ನು ಅಧ್ಯಕ್ಷನನ್ನಾಗಿ ಮಾಡಿದರು. ಇತ್ತ ಟರ್ಕ್ವಿನಿಯುಸ್ಸು (Tarquinius) ಕ್ಲೂಸಿಯಂ ಪಟ್ಟಣಕ್ಕೆ (Clusium) ಓಡಿ ಹೋಗಿ ಅಲ್ಲಿಯರಸನಾದ ಹರಸೇನ (Porsena)ನಿಗೆ ದೂರಿಡಲು—

ಕ್ಲೂಸಿಯಂ ಪುರವರದ ಹರಸೇನ ನೃಪಸಿಂಹ
ನಾಸಮಯದೊಂಬತ್ತು ಗರಗಳಂ ನೆನೆದು
ಮೋಸದಿಂ ಟರ್ಕ್ವಿನಿಗೆ ಕೇಡು ಬಗೆದವರ ಯಮ
ಪಾಶಕೊಡ್ಡುವೆನೆಂದನಂದು ತಾಂ ಪೂಣ್ದು ॥ ೧ ॥

ಆ ಸಮಯದೊಂಬತ್ತು ಗರಗಳಂ ನೆನೆದುತಾಂ
ದ್ವೇಷಸಾಧನೆಗೊಂದು ದಿನವನೆಣಿಸಿಟ್ಟು
ಸಾಸಿಗರ ಸೈನಿಕರ ಸಮರಕನುವಾಗಿಸಲು
ಘೋಷದಿಂ ಬೆಸಸಿದನು ದೂತರಂ ಬಿಟ್ಟು ॥ ೨ ॥

ಒಡನೆ ತಮ್ಮೊಡೆಯನ ಕಟ್ಟಾಣತಿಯನ್ನು ಶಿರಸಾವಹಿಸಿ,

ಮೂಡಲಿಗೆ ಪಡುವಲಿಗೆ ತೆಂಕಣ್ಗೆ ಬಡಗಣ್ಗೆ
ಓಡಿದರು ರಾವುತರು ಗಾಳಿಯಿಂ ಮುಂದು
ನಾಡುನಾಡುಗಳ ಸೇನಾನಿವಾಸಗಳಲ್ಲಿ
ನೀಡಿದರು ಹರಸೇನನಾಣತಿಯನಂದು ॥ ೩ ॥

ಪುರದಲ್ಲಿ ಹಳ್ಳಿಯಲಿ ಹರ್ಮ್ಯದಲಿ ಗುಡಿಸಿಲಲಿ
ಹರಸೇನನಾಣತಿಯ, ಕಹಳೆಗಳ ಕೂಗಿ,

ಅರುಹಿದರು ತಮ್ಮರಸುಧಾಳಿಗನುವಾಗಿಹನು
ಅರಿಜನರ ಮೇಲೆಂದು ತಮ್ಮಟವ ಮೊಳಗಿ. ॥ ೪ ॥

ಅರಿಜನರನಿರಿಯಲ್ಕೆ ಹರಸೇನ ಮುಂದೊತ್ತೆ
ತರುಣಿಯರ ನಗುಮೊಗದ ಸಲ್ಲಾಪಕೆಳಸಿ
ಮರೆಯಲ್ಲಿ ಮನೆಯಲ್ಲಿ ಕುಳಿತರ್ಗೆ ಧಿಕ್ಕಾರ
ವಿರಲೆಂದು ಕೂಗಿದರು ಊರೂರ ಬಳಸಿ ॥ ೫ ॥

ಇಂತು ಸಾರಿದ ಡಂಗುರವನ್ನು ಕೇಳಿ,

ವಾಜಿಗಳ ರಾಜಿಗಳು ಕಾಲಾಳಮೇಳಗಳು
ರಾಜಾಜ್ಞೆಗನುವಾಗಿ ಮೇಳಯಿಸಿಬಂದು
ರಾಜಿಸುವ ಕೈದುಗಳ ಮೋಹರಗಳೊಡವೆರಸಿ
ಮೋಜಿನಿಂ ಕೂಡಿದುವು ಪಟ್ಟಣದ ಮುಂದು. ॥ ೬ ॥

ಈ ರೀತಿ ಬಲಿಷ್ಠರೂ ತರುಣರೂ ಸೈನ್ಯಕ್ಕೆ ಸೇರಿದುದರಿಂದ ದೇಶದಲ್ಲಿ—

ಕಣ್ಣುಕಾಣದ ಹಣ್ಣು ಮುದುಕರೆಲ್ಲರು ಬಂದು
ಹಣ್ಣಾದ ಕೈಗಳನು ಕೊಯ್ಯುತ್ತಲಿಹರು,
ಸಣ್ಣ ಮಕ್ಕಳು ಮನೆಯ ದನಕರುಗಳಂ ಮೀಸಿ
ಉಣ್ಣಿಗಳ ಕಳೆದು ಮೇವಂ ಮೇಯಿಸುವರು. ॥ ೭ ॥

ಕಾಡಿನಲಿ ಮರಗಡಿವ ಬಡಗಿಯರ ಸದ್ದಿಲ್ಲ
ಬೇಡರಲೆದಾಟಗಳ ಕಳವಳಗಳಿಲ್ಲ!
ನಾಡಿನಲಿ ಹೊಲವುಳುವ ಜನರ ಕೂಗುಲಿಯಿಲ್ಲ ॥ ೮ ॥
ಗಾಡಿಗಳ ಹೊರಳಾಟ ಬೀದಿಗಳೊಳಿಲ್ಲ!

ಕೋಗಿಲೆಯನಣಕಿಸುವ ಕಂಠದಿಂ ರಾಗದಲಿ
ಕೂಗುವೆಳೆವೆಂಡಿರಿಗೆ ಪತಿಯ ಜತೆಯಿಲ್ಲ!
ಬಾಗೆವೂಮಾಲೆದೋಳನು ಪತಿಯ ಭುಜದಿಟ್ಟು
ರಾಗದಿಂ ವಿಹರಿಸುವ ದಿವಸಾಂತವಿಲ್ಲ! ॥ ೯ ॥

ಮುಂಜಾನೆ ನೇಸರುದಿಸಲು ಕೊಳದೆ ಕಮಲಗಳು,
ಮಂಜಿನಲಿ ಮಿಂದೆದ್ದು ನಗುನಗುತಲಿಹವು
ಮಂಜುಳಾಲಾಪೆಯರ ಮುಖಕಮಲಗಳು ಬಾಡು
ತಂಜುತ್ತೆ ಬಿರಯುದಿಂ ಕೊರಗುತ್ತಲಿಹವು. ॥ ೧೦ ॥

ದುಂಡುಮಲ್ಲಿಗೆಯರಳಿ ಚೆಂಡುಗಳ ತೆರನಾಗಿ,
ಮುಂಡಾಡುತಿಹವು ಮಂದಾನಿಲನ ಮೆಚ್ಚಿ,
ದುಂಡಾದ ಮೊಗವುಳ್ಳ ಕನ್ನೆಯರಹಲ್ಲೆಂಬ
ದುಂಡುಮಲ್ಲಿಗೆಯೆಲ್ಲ ಮುರುಟಿಹವು ಮುಚ್ಚಿ. ॥ ೧೧ ॥

ಕಾಡಹುಲ್ಲನು ತಿಂದು, ತೋಡನೀರನು ಕುಡಿದು,
ಓಡುತ್ತಲೆಗರುತ್ತ ಚಿಗಿಯುತ್ತ ಬಂದು,
ಬೇಡರಂಬಿನ ಭೀತಿ ಬೀತ ಹರಿಣಗಳಲ್ಲಿ
ನೋಡುವುವು ಮೊಗವೆತ್ತಿ ಬಯಲಲ್ಲಿ ನಿಂದು. ॥ ೧೨ ॥

ನಾಡುನಾಡುಗಳಿಂದ ಪಡೆಗಳೋಡುತ ಬಂದು
ಬೀಡುಗೊಂಡುವು ಪಟ್ಟಣದ ಬಾಗಿಲೊತ್ತು
ಕೂಡಿದುವು ಕಾಲಾಳ ಸಾವಿರಗಳೆಂಬತ್ತು
ರೂಢಿಸಿದ ಕುದುರೆಗಳ ಸಾವಿರವು ಹತ್ತು! ॥ ೧೩ ॥

ಒಡೆಯನೆನಿಸಿದ ತನ್ನ ನುಡಿಗೊಡಲ ಕುಡಲಿರುವ
ಪಡೆವಳರ ಗಡಣವನು ಹರಸೇನ ನೋಡಿ
ನಡೆಯುತ್ತ ಸೈನ್ಯದೆಡೆ ಬರುತಿರಲು ಹೊಮ್ಮಿದುದು,
ಹಿಡಿಯಲಾರದೆ ಹೃದಯದೊಳಗವನ ಗಾಡಿ! ॥ ೧೪ ॥

ಹೊತ್ತಾರೆ ಬೈಗಿನಲಿ ಮತ್ತೆದಿನ ರಾತ್ರಿಯಲಿ,
ಸಿತ್ತಿಹರು ಮೂವತ್ತು ಜೋಯಿಸರು ಸನಿಯ,
ಎತ್ತಿ ಕೈಗಳ ಹರಸಿ ಹರಸೇನ ಭೂಭುಜಗೆ
ಬಿತ್ತರಿಸೆ ಗ್ರಹಚಾರ ಫಲನ ಮೇಣ್ ಕಣಿಯ. ॥ ೧೫ ॥

ಗ್ರಹಚಾರ ಫಲಗಳನು ಮೂವತ್ತು ಜೋಯಿಸರು,
ಗಹನದಿಂಗುಣಿಸಿದರು ಬಳಿಕವೊಂದಾಗಿ
ಬಹು ವಿಜಯ ನಿನಗಕ್ಕು ಹೋಗೆಂದು ಹರಸಿದರು
ಬಹು ವಿಧದ ಮಂತ್ರಗಳನುಚ್ಚರಿಸಿ ಸಾಗಿ. ॥ ೧೬ ॥

ಸೇನೆಗಳು ಸಜ್ಜಾಗಿ ಬಯಲಲ್ಲಿ ನಿಂದಿರಲು
ಸೇನಾನಿಗಳ ಬಳಗದೊಡನೆ ಹರಸೇನ
ಮೋನದಲಿ ದಂತರಥವೇರಿದೊಡೆ ಭೇರಿಗಳು
ಬಾನೆ ಬಿರಿವಂತೆ ಮೊಳಗಿದುವು ರಣಗಾನ. ॥ ೧೭ ॥

ಹರಸೇನ ಭೂಪಾಲನು ಟರ್ಕ್ವಿನಿಯಸ್ಸನ್ನೊಡಗೊಂಡು ಮಹತ್ತಾದ ಸೈನ್ಯವನ್ನೂ ಕೂಡಿಕೊಂಡು, ರೋಮ್ ನಗರವನ್ನು ಮುತ್ತುವನೆಂಬ ವಾರ್ತೆಯು ಹರಡಲು, ಅತ್ತ ರೋಮನರು ಭಯಗ್ರಸ್ತರಾಗಿ ರಸ್ತೆಗಳಲ್ಲಿ ಕಿಕ್ಕಿರಿದು ರಕ್ಷಣೆಗಾಗಿ ರಾಜಧಾನಿಯೆಡೆಗೆ ಸಾಗಿಬರುತ್ತಿದ್ದರು.

ಇತ್ತ ನೆರೆಬಂದ ಟೈಬರಿಯ ಬಳಿಗೊಂದಲವು
ಹತ್ತಿತ್ತು. ಜನರೆದೆಯ ಭಯವು ಹಿಡಿದಿತ್ತು.
ಸುತ್ತಲಿನ ಹಳ್ಳಿಗಳನೆಲ್ಲಾ ಜನಂ ರೋಮ
ಪತ್ತನಕೆ ರಕ್ಷಣೆಗೆ ಓಡಿ ಬಂದಿತ್ತು! ॥ ೧೮ ॥

ಗಾವುದದ ಪರಿಯಂತ ಪುರದ ಪೊರಪರಿಸರದೆ
ಸಾವಿನಂಜಿಕೆಯ ಜನ ನೆರೆದು ಬಂದಿತ್ತು
ಬೇವಬೆಂಬಿಸಿಲಲ್ಲಿ ಮರುಗುವರ ನೋಡಿದರೆ
ಸಾವೆ ಕಣ್ಣೀರ್ವಿಡಿದು ಕೊರಗಬೇಕಿತ್ತು! ॥ ೧೯ ॥

ಹಣ್ಣು ಮುದುಕರು ನಡುಗುಗೈಯೂರು ಗೋಲೂರಿ
ಕಣ್ಣನರೆಮುಚ್ಚಿ ನಡುಗುತ್ತ ನಡೆಯುವರು.
ಚಿಣ್ಣ ಮಕ್ಕಳನೆದೆಗೆ ತಬ್ಬಿ ಬಹ ರಮಣಿಯರು
ಕಣ್ಣೀರಿನಿಂದೆಲ್ಲ ತೊಯ್ದು ಹೋಗಿಹರು. ॥ ೨೦ ॥

ಕೊಳೆಯಿಂ ಹಾಸಿನೊಳೆ ಹೊರಳದಿಹ ರೋಗಿಗಳ
ಡೋಲಿಗಳೆ ಸಾಲಾಗಿ ಸಾಗಿ ಬರುತಿಹವು
ಹಾಲುಹಿಳ್ಳೆಗಳು ಪಟ್ಟಿರ್ಪ ತೊಟ್ಟಿಲ ಸಾಲು
ಸಾಲಾಗಿ ಪಟ್ಟಣದ ಕಡೆಬರುತಲಿಹವು ॥ ೨೧ ॥

ಕಾಲುಗಳ ಬಿಸಿನೆಲದೊಳೂರಲಾರದೆ ಮುರುಗಿ
ಬಾಲಕರ ಬಳಗಗಳು ಬಳಲಿ ಬರುತಿಹವು
ಬಾಲೆಯರ ಕಂಬನಿಯು ಕೆನ್ನೆಯಲಿ ಕೆಳಗುರುಳೆ
ಪಾಲಿಸಿದವರ ಮನವೆ ಕರಗಿ ಸೋರುವುವು. ॥ ೨೨ ॥

ಬಂಡಿಗಳ ಸಾಲುಗಳು ಭಾರದಿಂ ಬೀಂಕುತ್ತ
ತಂಡತಂಡದೆ ಹಳ್ಳಿಹಳ್ಳಿಯಿಂ ಬಂದು
ಅಂಡಲೆವ ಹರಸೇನರಕ್ಕಸಗೆ ಸಿಕ್ಕದೊಲು
ಬಂಡಿಮಾಳಕೆ ಬಂದುವಾ ಹೊಳಲಮುಂದು, ॥ ೨೩ ॥

ಹೀಗೆ ಪಟ್ಟಣದ ಮುಂದೆ ಎಲ್ಲೆಡೆಗಳಲ್ಲಿಯೂ ಜನಸ್ತೋಮವು ಕಿಕ್ಕಿರಿದು ನೆರೆದಿರಲು—

ಬಿಸಿಲಲ್ಲಿ ಬೆಂದವರೆ ನೋವಿಂದೆ ನೊಂದವರೆ!
ಹಸಿವಿಂದೆ ಬಸವಡಗಿ ನಿಡುಸುಯ್ಯುವವರೆ!
ದೆಸೆಗೆಟ್ಟು ಬಸಗೆಟ್ಟು ಗತಿಗೆಟ್ಟು ಮತಿಗೆಟ್ಟು
ಕುಸಿದವರೆ ಕಂಗೆಟ್ಟು ಕೊರಗಿ ಸೊರಗಿದರೆ! ॥ ೨೪ ॥

ಎರಡುಪಗಲೆರಡಿರುಳು ಜನವೀ ತೆರದೊಳಿತ್ತು
ಕರಕರೆಯು ಕಡಲುಕ್ಕಿ ಕವಲುವರಿದಿತ್ತು
ಮರಮರನೆ ಮರುಗುವಾ ಮಂದಿಯಂ ನೋಡಿದರೆ
ಮರಣವೂ ಕಣ್ಣೀರ ಸುರಿಸಬೇಕಿತ್ತು! ॥ ೨೫ ॥

ಇತ್ತ ನಗರದೊಳಗೆ

ಕೊತ್ತಳದ ಕೊನೆಯಿಂದ ಕಾವಲರು ಕಾಣುವರು
ಹೊತ್ತಿ ಧಗಿಸುವ ಕೆಂಕ ಬಾನಂಚಿನಲ್ಲಿ
ಕತ್ತಲೆಯ ನಡುವಿರುಳು ಕೆಂಪೆಸೆದ ಬಾನಂಚು
ಬಿತ್ತರಿಸಿ ಕಾಣಿಸಿತು ಹೊಗೆ ಸುಳಿಗಳಲ್ಲಿ ॥ ೨೬ ॥

ಪಟ್ಟಣವ ಪಾಲಕರು ಕಾಯುತ್ತ ಕುಳಿತಿಹರು
ನಿಟ್ಟೆಯಲಿ ಹಗಲೂಟ ನಿದ್ದೆಯಿರುಳಿರದೆ
ಕೆಟ್ಟ ವಾರ್ತೆಗಳನ್ನು ನಿಮಿಷನಿಮಿಷಕೆ ತಂದು
ಮುಟ್ಟಿಸುವ ರಾವುತರು ಧಾವಿಪರು ಭರದೆ ॥ ೨೭ ॥

ಮೂಡಲಿಗೆ ಪಡುವಲಿಗೆ ಹರಡಿದ್ದ ಶತ್ರುದಳ
ನಾಡುಗಳ ಸುಡುತಿತ್ತು ಬರಬರುತಲೆಲ್ಲ
ನಾಡಲ್ಲಿ ಹೊಲವಿಲ್ಲ ಮನೆಯಿಲ್ಲ ಜನವಿಲ್ಲ
ಬೀಡಿಲ್ಲ ದನವಿಲ್ಲನಾಡುಕುರಿಯಿಲ್ಲ ॥ ೨೮ ॥

ಮರವಿಲ್ಲ ಗಿಡವಿಲ್ಲ ಹೊದರಿಲ್ಲ ಹುಲ್ಲಿಲ್ಲ
ಕರಿಕುವರಿದಿತ್ತಲ್ಲಿ ನಾಡ ನೆಲವೆಲ್ಲ
ಹರಸೇನ ಹೋದಲ್ಲಿ ಪಡೆನಡೆದು ಬಂದಲ್ಲಿ
ಮರುಭೂಮಿಯಾಯ್ತಯ್ಯೊ ಹಸಲೆನೆಲವೆಲ್ಲ! ॥ ೨೯ ॥

ಜನಿಕುಲಂ ಪಟ್ಟಣವ ರೋಷದಿಂ ನೆಲಕೊರಸಿ
ಜನರೆಲ್ಲರಂ ಕೊಂದು ಕೆನ್ನೀರ ಹೊಳೆಯ
ಹೊನಲನ್ನು ಹರಿಸಿದನು ಹಸುರು ನೆಲ ಕೆಂಪಾಗಿ
ಮುನಿದಂತಿರಿತ್ತು ಹರಸೇನನಾ ಬಳಿಯು ॥ ೩೦ ॥

ಹರುಷದಿಂ ಮೂವತ್ತು ಜೋಯಿಸರ ಮೊಗನೋಡೆ
ಹರಸಿದರು ಕೈಯೆತ್ತಿ ಘೋಷದಿಂದಂದು

ಉರವಣಿಸಿತಾ ಪಡೆಯು ಜಯಭೇರಿ ಮೊಳಗಿಸುತ
ತರಹರಿಸಿ ಜಯಕಾರವೆಸಗುತ್ತ ಮುಂದು! ॥ ೩೧ ॥

ಸೇನೆಗಳು ಸಜ್ಜಾಗಿ ಬಯಲಲ್ಲಿ ನಿಂದಿರಲು
ಸೇನಾನಿಗಳ ಬಳಗದೊಡನೆ ಹರಸೇನ
ಮೋನದಲಿ ದಂತರಥವೇರಿದೊಡೆ ಭೇರಿಗಳು
ಬಾನೆ ಬಿರಿವಂತೆ ಮೊಳಗಿದುವು ರಣಗಾನ ॥ ೩೨ ॥

ಆಗ ಟೈಬರ ನದಿಯ ಸೇತುವೆಯ ಬಳಿಯಲ್ಲಿ
ಬೇಗ ಸಭೆ ಸೇರಿದರು ನಗರಪಾಲಕರು
ಸಾಗಿಬಹಶತ್ರುದಳ ಮಾರಾನೆ ಪುರಗಾವ
ಪಾಂಗದೆಂತೆಂದು ಬಹುಪರಿ ಚಿಂತಿಸುವರು ॥ ೩೩ ॥

ಜನಿಕುಲದ ದುರ್ಗದಾವಾರ್ತೆಯನು ಕೇಳ್ದೊಡನೆ
ಹನಿಹನಿಸಿ ಕಂಬನಿಯು ಮುಂಗದಪಿನಲ್ಲಿ
ಪೊನಲಾಗಿ ಹರಿಯುತಿರೆ ಕಂಠವುಮ್ಮಳಿಸಿದುದು
ಜನರಧಿಕಂಗೆದೆಯ ಮರುಕದುರಿಯಲ್ಲಿ ॥ ೩೪ ॥

ಪುರಪಾಲರಧ್ಯಕ್ಷನಾರೋಮರಾಜ್ಯದೊಳು
ವರಧೈರ್ಯದವತಾರನವರೊಳಗೆ ಸದಯ
ವರಧೈರ್ಯದವತಾರವೆನಿಸಿರ್ದೊಡವನೀಗ
ಹಿರಿದಾಗಿ ಮರುಗುವನು ಸೊರಗುತಿರೆ ಹೃದಯ ॥ ೩೫ ॥

ಹೀಗಿದ್ದರೂ ಮರುಕ್ಷಣದಲ್ಲಿ ಧೈರ್ಯವನ್ನಲಂಬಿಸಿಕೊಂಡು

ಗದ್ದುಗೆಯ ಮೇಲಿಂದ ಗಂಭೀರವಾಣಿಯಲಿ
ಅಧ್ಯಕನು ಯೋಚಿಸುತ ಹಂಚಿಕೆಯನೊಂದ
ಗುದ್ದಿಕೆಡೆವುದೆ ಲೇಸು ಟೈಬರಿಯಸೇತುವೆಯ
ನೆದ್ದರಿಗಳೀಪುರವ ಪುಗುವ ಮೊದಲೆಂದ ॥ ೩೬ ॥

ಜನಿಕುಲದ ದುರ್ಗವಾ ಶತ್ರುಗಳ ವಶವಾಯ್ತು
ಜನರಕ್ಷಣೋಪಾಯ ವಿನ್ನಾವುದುಂಟು
ಜನರೆಲ್ಲರೊಟ್ಟಾಗಿ ಸಂಕವನೆ ಕಡಿದುಬಿಡಿ
ಅನುಮಾನವೇಂ ಜಯವು ನಮ್ಮ ಕೈಗಂಟು ॥ ೩೭ ॥

ನಗರಾಧ್ಯಕ್ಷನು ಈ ರೀತಿಯಲ್ಲಿ ಪಟ್ಟಣದ ಒಂದೇ ಒಂದು ರಕ್ಷಣೋಪಾಯವನ್ನು ವಿವರಿಸಿ ಜನರ ಕಳವಳವನ್ನು ನೀಗುತ್ತಿರಲು—

ಹಾರಿದನು ದೂರದಿಂ ಬೇಹುಕಾರನವೊಬ್ಬ
ಕೂರಂಬಿನಂದದಿಂದಾ ಸಭೆಯ ಮುಂದೆ
ನೇರಾಗಿ ಗದ್ದುಗೆಯ ಮೇಲಿನಧಿಕನ ಬಳಿ
ಸೇರಿ ಹೇಳಿದನಿಂತು ನಡುಗುದನಿಯಿಂದೆ ॥ ೩೮ ॥

ಏನು ಸಭೆ ಮಾಡುವಿರಿ ಏನು ಮಂತ್ರದೊಳಿಹಿರಿ?
ಏನೇನು ತಡವೇನು? ಕೈದೆತ್ತಿಕೊಂಡು
ಸೇನೆ ಧಾವಿಸಲಿಂದೆ, ಅರಿಗಳೊತ್ತುವ ಮುಂದೆ
ಮೋನವೇನದೊ ನೋಡಿ ಶತ್ರುಗಳ ದಂಡು! ॥ ೩೯ ॥

ಆಗ ಗಾಬರಿಗೊಂಡು

ಪಡುಗಡೆಯ ಗುಡ್ಡದತ್ತಧಿಕನು ನೋಡಿದನು
ನಿಡುವಣೆಗೆ ತನ್ನ ಕೈದಳವನ್ನೆ ಸಾಚಿ
ಪಡುವಿಗಂತದ ಮೇಲೆ ಕೆಮ್ಮೋಡವೊಂದೆದ್ದು
ನಿಡಿದಾಗಿ ಬರುತಿತ್ತು ಸನಿಯಕ್ಕೆ ಚಾಚಿ ॥ ೪೦ ॥

ನೋಡನೋಡುತಲಿರಲು ದೂರದಾ ಕೆಮ್ಮೋಡ
ಓಡೋಡಿ ಮುಂದಕ್ಕೆ ಸನಿಯಕ್ಕೆ ಬಂತು
ರೂಢಿಸಿದ ಭೇರಿಗಳ ಮೊಳಗನೊಡವೆರಸಿರ್ದ
ಝಾಡಿಸುವ ಘೋಷವೂ ಕೇಳಿಸುತ ಬಂತು ॥ ೪೧ ॥

ಈಗ ಕೆನ್ನೋಡದೆಡೆ ತೋರುತಿವೆ ಈಟಿಗಳು
ಈಗ ಕೆನ್ನೋಡದೆಡೆ ಕೈದುಸಾಲುಗಳು
ಈಗ ಕೆನ್ನೋಡದೆಡೆ ಮುಕುಟಗಳ ಸಾಲುಗಳು
ಈಗ ಕೆನ್ನೋಡದೆಡೆ ಬಿಲ್ಲುಸಾಲುಗಳು ॥ ೪೨ ॥

ದೂರದಲಿ ಬಲಗಡೆಗೆ ಸೇನೆಗಳ ಸಾಲುಗಳು
ದೂರದಲಿ ಎಡಗಡೆಗೆ ಸೇನೆಗಳಪಾರ
ದೂರದಲಿ ಮುಂಗಡೆಗೆ ಸೇನೆಗಳ ಸಾಲುಗಳು
ನೇರಾಗಿ ಬರುತಿರ್ದುವೇವೇಳ್ವೆನೇರ! ॥ ೪೩ ॥

ಅದ್ವಿಕನ ಪೋರೆ ಕಳೆಗುಂದಿ ಬಲು ಬಸನದಿಂ
ಬಿದ್ದು ಹೋದುದು ಮಾತು ಗಂಟಲೊಳಗಿಳಿದು
ಎದ್ದು ಬಹ ಶತ್ರುಗಳನೊಮ್ಮೆ ನೋಡಿದನವನು
ಹೆದ್ದೊರೆಯ ಬಳಿಯ ಕೋಟೆಯನೊಮ್ಮೆ ಮುಳಿದು ॥ ೪೪ ॥

ಆಗ ಅಧ್ಯಕ್ಷನು ಗದ್ಗದ ಸ್ವರದಿಂದ ಹೀಗೆಂದನು—

ಅವರ ಚೂಣಿಯು ಬಂದು ಸಂಕಮುರಿಯುವ ಮುಂದು
ತವಕದಿಂದೆಡೆಗೊಂಬುದಿಂದು ಮತ್ತೇಂತು
ಅವರು ಸೇತುವ ಗೆಲ್ದು ಬಳಿಕ ಪಟ್ಟಣದಾಸೆ
ತವಿಸಿತೇ ರೋಮನರ ಸ್ವಾತಂತ್ರ್ಯವಿಂತು! ॥ ೪೫ ॥

ಅರಿನೃಪರ ಪಾದಗಳ ಸೋಂಕಿಂದಲೀತನಕ
ಹರಹರಾ! ಮಲಿನವಾಗದ ನಮ್ಮ ನಗರ
ಪರನೃಪಗೆ ಸೆರೆಯಾಗಿ ಮರುಗುವಂತಾಯ್ತುಯ್ಯೊ
ಪರಿಹರಿಪುದೆಂತಕಟ ಮುತ್ತುವರಿಭಟರ ॥ ೪೬ ॥

ಇದನ್ನು ಕೇಳಿದ ಸಭಿಕರ ಮಧ್ಯದಿಂದ

ಸೇತುಪಾಲಕ ಹರೇಶನು ಸಟೆದು ಮೇಲೆದ್ದು
ಮಾತೆಂದನಿಂತು ವೀರಾವೇಶದಿಂದೆ

ಭೂತಲದೆ ಪುಟ್ಟಿದವನೇಂ ಯುಗಂಬಾಳ್ದಪನೆ?
ಏತರಂಜಿಕೆಯೊಂದಿನಂ ಮುಂದೆ ಹಿಂದೆ! ॥ ೪೭ ॥

ತನ್ನ ಹಿರಿಯರ ಕೀರ್ತಿಯನು ಮೆರೆಸುವುದಕಾಗಿ
ತನ್ನ ದೇವರ ಗುಡಿಯ ಕಾವುದಕ್ಕಾಗಿ
ತನ್ನೊಡಲ ಬಲಿಗೊಟ್ಟು ಕಾದಿ ಸಾಯದ ಬಳಿಕ
ಇನ್ನಿದೀನರಜನ್ಮವೆಮಗೇತಕಾಗಿ? ॥ ೪೮ ॥

ಕೆಡವಿಬಿಡಿ ಸೇತುವೆಯನತಿವೇಗದಿಂದನಿತು
ತಡವರಂ ಶತ್ರುಗಳ ಹೊಳೆವಾಗಿಲಲ್ಲಿ
ತಡೆಯುವೆನು ತುಡುಕುವೆನು ಕಡುಗಿದರ ಕೆಡಹುವೆನು
ಎಡಬಲದೊಳೆನಗಿಬ್ಬರಿರೆ ನೆರವಿಗಲ್ಲಿ ॥ ೪೯ ॥

ಸೇತುವೆಯ ಬಾಗಿಲಲಿ ಪರಭಟರ ಸಾವಿರವ
ನೇತರಂಜಿಕೆ ಮೂವರೇ ತಡೆಯಬಹುದು
ಭೀತಿಯಂ ಕಿತ್ತೊಗೆದು ಯಾರು ಬಹರೆನ್ನೊಡನೆ
ಮಾತಾಡಿ ಸೋದರರೆ, ಕೆಚ್ಚಾರಿಗಿಹುದು? ॥ ೫೦ ॥

ಆಗ ಲಾರ್ಶಿಯುಸ್ಸು ಮತ್ತು ಹರ್ಮಿನಿಯುಸ್ಸು ಎಂಬ ವೀರ ಪುರುಷರಿಬ್ಬರು ಸೇತುವೆಯ ಹೆಬ್ಬಾಗಿಲ ಬಳಿಯಲ್ಲಿ ಹರೇಶನಿಗೆ ನೆರವಾಗಿ ಇಕ್ಕಡೆಗಳಲ್ಲಿ ನಿಲ್ಲುವುದಕ್ಕೆ ಮುಂದೆ ಬಂದರು.

ಒಡನೆ ಮೂವರು ತಮ್ಮ ಕವಚಗಳ ತುಡುತಿರಲು
ಕೊಡಲಿಯನು ಕೈದಳದೊಳಧ್ಯಕ್ಷನೆ ಮುಂದೆ
ಪಿಡಿದು ಸಂಕದ ಕಂಬ ಕಡಿಯಲುಜ್ಜುಗಿಸಿದನು
ತಡವಿರದೆ ರೋಮನರಿಗೆಲ್ಲರಿಗು ತಂದೆ! ॥ ೫೧ ॥

ಅಧ್ಯಕ್ಷನೇ ಕೊಡಲಿವಿಡಿದು ಕೆಲಸಕ್ಕೆ ಇಳಿದುದನ್ನು ನೋಡಿ—

ಹಿರಿಯವರು ಕಿರಿಯವರು ಗಂಡುಸರು ಹೆಂಗುಸರು
ಗುರಿಕಾರ ಹರಿಕಾರ ತಳವಾರರೆಲ್ಲ

ಪೇರೊಡೆಯರಾಳುಗಳು ಮಧ್ಯಸ್ಥರೊಂದಾಗಿ
ಸೇರಿದರು ನಿಮಿಷದಲಿ ಸೇತುಬಳಿಯೆಲ್ಲ! ॥ ೫೨ ॥

ಹಾರುವರು ಮಾರುವರು ತಂತ್ರಿಗಳು ಮಂತ್ರಿಗಳು
ನೇರಿದರು ಪಂಡಿತರು ಶಾಸ್ತ್ರಿಗಳುಯೆಲ್ಲ!
ಸೂರಿಗಳು ಗುತ್ತಿನವರುಗ್ರಾಣಿಗಳು ಬಂದು
ಸೇರಿದರು ನಿಮಿಷದಲಿ ಸೇತುಬಳಿಯೆಲ್ಲ! ॥ ೫೩ ॥

ಬಡವ ಬಲ್ಲಿದರಿವರು ಧನಿವೊಕ್ಕಲುಗಳಿವರು
ಕುಡುವರಿವರೆರೆವರಿವರೆಂಬ ನುಡಿಯಿಲ್ಲ
ಅಡಪವಳ ಗಟ್ಟಿವಳ ಮಡಿವಾಳರೆಂದಿರದೆ
ತಡವಿರದೆ ಸೇರಿದರು ಸೇತುಬಳಿಯೆಲ್ಲ! ॥ ೫೪ ॥

ಹರಿಗತ್ತಿ ಕುಡುಗತ್ತಿ ಸೈಗೋಲು ಕೊಡಲಿಗಳ
ಗರಗಸವ ಮಚ್ಚುಗಳ ಸನ್ನೆಕೋಲುಗಳ
ಮುರಿಬಾಜಿಯುಳಿಕೊಡತಿವಿಡಿದು ಸಂಕವನುಡಿದು
ಕೊರೆದು ಸೀಳುತಲಿಹರು ಮುರಿದು ಕಂಬಗಳ! ॥ ೫೫ ॥

ಕೀಲುಗಳ ಕೀಳುವರು ತೋಳುಗಳ ಪೂಳುವರು
ಕಾಲುಗಳ ಸಡಿಲಿಸುತ ಕೊಕ್ಕೆಗಳ ತಿಕ್ಕಿ,
ಮೇಲಡ್ಡಕೊಳವಿಗಳ ಸುಣ್ಣಗಳ ಮುರಿಯುವರು
ಸೋಲರಿಯದಾ ಮನದ ಹೆಮ್ಮೆಯಿಂದುಕ್ಕಿ. ॥ ೫೬ ॥

ಈ ರೀತಿಯಲ್ಲಿ ರೋಮನರು, ಶತ್ರುಗಳು ಸಮಿಾಪಿಸುವ ಮೊದಲೆ ಟೈಬರ ನದಿಯ ಸೇತುವೆಯನ್ನು ಬಹಳ ಸಾಹಸದಿಂದ ಕೆಡವಿಬಿಡಲುಜ್ಜುಗಿಸುತ್ತಿರಲು ಅತ್ತ—

ಹರಸೇನ ಭೂಪತಿಯ ಪಡೆ ನಡೆದು ಬರುತಿತ್ತು
ಮಿರುಗುತಿರೆ ರನ್ನಗಳು ಪೊನ್ನ ಮಕುಟದಲಿ

ಪರಿಪರಿಯ ಕೈದುಗಳು ತೊಳಗುತಿರೆ ಸಾಲಿನಲಿ
ಪರಿವ ಧೂಳಿಯ ಮೋಡ ಸುಳಿಯೆ ಬಾನಿನಲಿ ॥ ೫೭ ॥

ಸುಗ್ಗಿಯಲಿ ಅಶ್ವತ್ಥತರುವೆಲೆಗಳಲೆವಂತೆ
ನುಗ್ಗಿಬಹ ಶತ್ರುಗಳ ಕೇತನಗಳಲೆದು
ನುಗ್ಗಿದುವು, ನಡುವಗಲ ಝಳಪಿಸುವ ಬಿಸಿಲಿನಲಿ
ಮೊಗ್ಗರಿಸಿದುವು ವಾಜಿರಾಜಿಗಳು ಮಲೆದು ॥ ೫೮ ॥

ಒತ್ತಿ ಬಹ ಶತ್ರುಗಳ ಮೊತ್ತದೊಳಗೆತ್ತಲೂ
ಎತ್ತಿ ಹಿರಿದಾಕತ್ತಿಗಳೆ ತೊಳಗುತಿಹವು
ಎತ್ತಿದ ಕಠಾರಿಗಳ ಮಿಂಚುವೊನೆ ಮಿಸುಗುತಿರ
ಲತ್ತನೋಳ್ಪರ ಕಣ್ಣುಗಳು ಕುರುಡಿಸುವುವು ॥ ೫೯ ॥

ಪಡೆಯು ನಡೆಯುತೆ ಸನಿಯಸನಿಯಕ್ಕೆ ಬರುತಿರಲು
ಒಡನೊಡನೆ ಪಟಹ ನಿಸ್ಸಾಳ ಭೇರಿಗಳು
ಕುಡುಹಿದುವು ಭೋರ್ಗರೆದು ಭೋರೆಂದು ಭೋಂಕರಿಸಿ
ಗುಡುಗಿದುವು ನಲುವತ್ತು ನೂರು ಕಹಳೆಗಳು! ॥ ೬೦ ॥

ತೇರುಗಳ ಕೀಂಕಾರ ವಾಜಿಗಳ ಹೇಕಾರ
ಭೇರಿಗಳ ಭಾಂಕಾರ ತುಂಬಿತೆಲ್ಲೆಡೆಯ
ವೀರ ಯೋಧರ ಬಿಲ್ಲನಾರಿಗಳ ಟಂಕಾರ
ಸೇರಿ ನಡನಡುಗಿಸಿತು ರೋಮನರ ಪೊಡೆಯ ॥ ೬೧ ॥

ಹೀಗೆ ನಡೆದು ಬರುತ್ತಿರುವ ಮೃತ್ಯುವಿನ ಪರಿವಾರವೆಂಬಂತಿರುವ ಆ ಹರಸೇನನ ಸೇನಾಸಾಗರಕ್ಕಿದಿರಾಗಿ—

ಅಲ್ಲಿಹರು ಮೂವರಿ ಹೊಳೆಯ ಹೆಬ್ಬಾಗಿಲಿ
ಬಲ್ಲಿದರೊಳರಿಗಳೊಳು ನೋಟವನು ನೆಟ್ಟು
ಗೆಲ್ಲವನತಾರವೆನೆ ಮೊಗವೆತ್ತಿ ಕೈದೆತ್ತಿ
ಚಲ್ಲಣವ ಬಿಗಿದು ಕಬ್ಬಿಣದಂಗಿದೊಟ್ಟು ॥ ೬೨ ॥

ಚಲ್ಲಣವ ಬಿಗಿದು ಕಬ್ಬಿಣದಂಗಿದೊಟ್ಟಿರ್ದು
ಸೊಲ್ಲಿಲ್ಲದಧರವನು ಕಚ್ಚುತ್ತೆ ನಿಂದು
ಘಲ್ಲೆಂದು ತಮ್ಮುನ್ನತಾಂಸಗಳ ನೇವರಿಸಿ
ಝಲ್ಲಿಸುವ ಕಿಡಿಗಳನು ಕಾರುತ್ತ ಮುಂದು ॥ ೬೩ ॥

ಸೇನೆ ನಡೆಯುತ ಬಂದು ಸೇತುವೆಯ ಬಳಿ ನಿಂದು
ಮೋನದಲಿ ನಿಂತಿರ್ಪ ಮೂವರನು ನೋಡಿ
ಏನ ನೆನೆದುದೊ ಅಟ್ಟಹಾಸವನು ಮಾಡಿದುದು
ಹೀನಾಯದಿಂ ಬಹಳ ರೋಷದಲಿ ಕೂಡಿ ॥ ೬೪ ॥

ಮುಂಬಡೆಯ ರಾವುತರ ಮೂರು ಸೇನಾಪತಿಗ
ಳಂಬಿನಂತೋಡುತ್ತ ಮುಂದಕ್ಕೆ ಬಂದು
ಮುಂಬಳಿಯ ಮಾರಾಂತ ಮೂವರನು ಮಗ್ಗಿಸಲು
ಅಂಬರದೆ ಕತ್ತಿಗಳ ಝಳಪಿಸಿದರಂದು! ॥ ೬೫ ॥

ಅಂಬರದೆ ಕತ್ತಿಗಳ ಝಳಪಿಸುತ ರೋಷದಲಿ
ಮುಂಬಳಿಯ ಮೂವರಿದ್ದೆಡೆಗಾಗಿ ಹಾರಿ
ಬೆಂಬಿಸಿಲೊಳೆಸೆಯುವ ಗುರಾಣಿಗಳ ಮೇಲಿತ್ತಿ
ತುಂಬಿದತಿವೇಗದಿಂ ಮೇಲ್ವಾಯೆ ಹೋರಿ ॥ ೬೬ ॥

ಹೆದರಿದರೆ ಚದರಿದರೆ ಬಳುಕಿದರೆ ಅಳುಕಿದರೆ
ಎದೆಯ ಮುಂದೊತ್ತಿ ಮೂವಂದಿ ರೋಮನರು
ತುದಿಯೆತ್ತಿ ಕತ್ತಿಯನು ಬೀಸಿದರು ಚಳಕಿಂದ
ಇದಿರಲ್ಲಿ ಕಾರ್ಮಿಂಚು ಮಿಂಚಿದಂತವರು! ॥ ೬೭ ॥

ಸಿಡಿಲೊಡೆದು ಹೊಡೆಯಲ್ಕೆ ನಡುವುಡಿದು ಧರೆಗುರುಳ್ವ
ನಿಡುಮರಗಳೆಂಬಂತೆ ಮೂವರರಿಭಟರು
ಪೊಡವಿಗುರುಳಿದರೊಡನೆ ಮಾರಾಂತರಿನ್ನನಿಬ
ರೊಡನೆ ಮಡಿದರು ಬಂದಬಂದಂತೆ ಭಟರು ॥ ೬೮ ॥

ಮಾರಾಂತರೆಲ್ಲರನು ಹೊಡೆಹೊಡೆದು ಕೆಡವಿದರು
ಶೂರರೆನಿಮಿಷದಲಿ ನೆತ್ತರಿನ ಹೊನಲು
ಸೇರಿಹರಿದುದು ಹೊಳೆಯು ಸುಳಿಯೊಡನೆ ವೈರಿಗಳ
ಶೌರಿಯವೆ ಹರಿಹಂಚಿ ಹರಿದುದೆಂದೆನಲು! ॥ ೬೯ ॥

ಇದಿರಲ್ಲಿ ಕೆಡೆದಟ್ಟೆಗಳ ರಾಶಿಯೇರಿರಲು
ಮುದುಡಿತರಿಭಟರೆದೆಯು ಕುಗ್ಗಿದುದುಕೆಚ್ಚು
ಹೃದಯದಲಿ ಹುದುಗಿದ್ದ ದುಮ್ಮಾನ ನಾಣೊಡನೆ
ಪುದುಗೊಂಡ ಮೊಗದಲ್ಲಿ ತೋರಿದುದು ಬೆಚ್ಚು! ॥ ೭೦ ॥

ಕಡಿವಡೆದ ತೋಳುಗಳ ಕೆಡೆದೊಡಲಸೀಳುಗಳ
ತೊಡೆಯುಡಿದ ಮುಂಡಗಳ ರುಂಡಗಳ ಹಿಂಡು!
ಇಡಿದಿಡಿದು ಬೀಳುತಿರೆ ಕಡುಭಯಂಕರವಾಗಿ
ಮಡಿದರಿಂದಿತ್ತಾಗ ನೆಲತುಂಬಿಕೊಂಡು! ॥ ೭೧ ॥

ನಿಡುನರದ ಕರುಳುಗಳು ಅಡಗುಗಳ ತಿರುಳುಗಳು
ಒಡೆದುಡಿದ ರುಂಡಗಳ ಮಜ್ಜಗಳ ಗುಜ್ಜು!
ಬಿಡುವಸೆಯು ಕಾಲುಗಳು ಅಟ್ಟೆಗಳ ಸಾಲುಗಳು
ಇಡಿದಿರ್ದುವಾಯೆಡೆಯೊಳೇನೆಂಬೆನಜ್ಜು! ॥ ೭೨ ॥

ಅಲ್ಲಿರ್ದಮೂವಂದಿ ಹೊಳೆಯ ಹೆಬ್ಬಾಗಿಲಲಿ
ಗೆಲ್ಲದವತಾರವೆನೆ ಹೋರುತಿರಲಿಂತು
ಬಲ್ಲಿದರ ಕೆನ್ನೀರು ಹೊನಲಾಗಿ ಹರಿಯುತಿರೆ
ಸೊಲ್ಲಿಪೆನು ಶತ್ರುದಳದಾಪರಿಯನೆಂತು? ॥ ೭೩ ॥

ಇತ್ತ ಹೀಗಿರುವಾಗ ಅತ್ತ ಸಂಕದ ಬಳಿಯಲ್ಲಿ—

ಕತ್ತಿಕೊಡಲಿಗಳಿರದೆ ತಮ್ಮ ಕೆಲಸವ ಮಾಡಿ
ಮತ್ತೆ ವಿಶ್ರಾಂತಿಗೊಂಡುವು ಹೊಳೆಯುಕಡೆಯೆ

ನಿತ್ತಿದ್ದ ಸೇತುವೆಯು ನಿರಿನಿಟಿಲುನಿಟಿಲೆಂದು
ಅತ್ತಿತ್ತ ಬೊಬ್ಬುಳಿಪ ಹೊನಲ ಮೇಲಲೆಯೆ ॥ ೭೪ ॥

ಅಧ್ಯಕ್ಷನೂ ಪೌರರೂ ಆ ಮೂವರನ್ನು ಕುರಿತು ಹೀಗೆಂದರು.

ಬನ್ನಿರೈ ಬನ್ನಿರೈ ಬೇಬೇಗ ಬನ್ನಿರೈ
ಬನ್ನಿರೈ ಸೇತುವೆಯು ಕೆಳಗುರುಳ್ವ ಮುನ್ನ!
ಬನ್ನಿರೈ ರೋಮನರ ಭಾಗ್ಯದೇವಿಯ ಸುತರೆ
ತನ್ನಿರೈ ನಮಗೆಲ್ಲ ಸ್ವಾತಂತ್ರ್ಯದನ್ನ! ॥ ೭೫ ॥

ಅಷ್ಟರಲ್ಲಿ ಲಾರ್ಶಿಯಸ್ಸು ಮತ್ತು ಹರ್ಮಿನಿಯಸ್ಸುಗಳಿಬ್ಬರೂ ಮಿಂಚಿನ ವೇಗದಿಂದ ಓಡಿಬಂದು ನಗರವನ್ನು ಸೇರಿದರು.

ಒಡನೆ ಗುಡುಗಿನ ತೆರದೆ ಗುಡುಗುಡಿಸಿ ಸೇತುವೆಯು
ನಡುವೊನಲ ಮೇಲಡ್ಡವಾಗಿ ಕೆಡೆದಿತ್ತು
ಕೆಡೆದ ರಭಸಕೆ ಹೊಳೆಯ ಕೆನ್ನೊರೆಯು ಗೋಪುರದ
ಕುಡಿಗೇರೆ ಪಟ್ಟಣದೆ ಹರುಷವುಕ್ಕಿತ್ತು. ॥ ೭೬ ॥

ಬೆದರದೆಯೆ ನಿಂದಿಹನು ಧೈರ್ಯದವತಾರವೆನೆ
ಕದಲದಿಹ ಮನದಿಂ ಹರೇಶನಾ ಬಳಿಯೂ
ಇದಿರಲ್ಲಿ ತೊಂಬತ್ತುಸಾವಿರರಿಭಟರುಗಳು
ಇದೆ ಹಿಂದೆ ಮುಳಿಸುಳಿಯ ಬೊಬ್ಬುಳಿಯ ಹೊಳೆಯು! ॥ ೭೭ ॥

ಆಗ ಅಲ್ಲಿದ್ದ ಹರೇಶನನ್ನು ನೋಡಿ—

ಕಡಿವುದವನನ್ನೆಂದು *ಶಕಟ ತಾನೊದರಿದನು
ಕಡುನಾಚಿ ಕಳೆಗುಂದಿ ಹಲ್ಲಕಿಸಿಯುತ್ತ
ಅಡಿಗಳಿಗೆ ಬೀಳೆಂದು ಹರಸೇನನಾರ್ಭಟಿಸಿ
ನುಡಿದನಡಿಗಳಿಗೆ ಬೀಳೆಂದು ಮರೆವುಗುತ ॥ ೭೮ ॥

ಆಗಲಾ ಹರೇಶನು—

ಹೇಡಿಗಳ ಸಾಲುಗಳ ನೋಡಲೇಕಿಂತೆಂಬ
ಮೋಡಿಯಿಂ ತಿರುಗಿದನು ಟೈಬರೆಯ ಕಡೆಗೆ

---

*Sextus

ಆಡಿದನೆ ಮಾತೊಂದ ಹೇಡಿ ಶಕಟನ ನುಡಿಗೆ?
ನೀಡಿದನೆ ಮರುಮಾತ ಹರಸೇನನೆಡೆಗೆ? ॥ ೭೯ ॥

ನೋಡಿದನು ಭಕ್ತ್ಯಶ್ರು ಸುರಿವ ಕಣ್ಣುಗಳಿಂದ
ನಾಡುಗರ ಬೀಡಿರ್ಪ ತನ್ನ ನಗರವನು
ನೀಡಿದನು ರೋಮನರ ದೇಗುಲವ ಬಲವರ್ಪ
ನಾಡ ನದಿಗೊಡನೊಂದು ಭಕ್ತಿಲಹರಿಯನು. ॥ ೮೦ ॥

ರೋಮನರ ಮಾತೆ ಓ ದೇವಿ ಟೈಬರಿಯೇ
ರೋಮನರನಾದಿಯಿಂ ಪೊರೆದ ವಾಹಿನಿಯೇ
ಪ್ರೇಮದಿಂದಿಂದೊಬ್ಬ ರೋಮನನ ಜೀವವನು
ರೋಮನನ ಕೈದುಗಳನುಳಿಸು ಪಾವನೆಯೆ! ॥ ೮೧ ॥

ಪ್ರೇಮದಿಂ ಕಾಪಾಡು ಪರಮ ಪಾವನೆಯೆಂದು
ಆ ಮಹಾ ನದಿಗೆ ಪೊಡಮಟ್ಟೊರೆಯೊಳಿಟ್ಟು
ನಾಮದಲಿ, ಖಡುಗವನು ಹೊಳೆಗೆಂದು ಧುಮುಕಿದನು
ಸಾಮರ್ಥ್ಯವೇನವನದೊಡನೆ ಧೀಂಕಿಟ್ಟು! ॥ ೮೨ ॥

ನದಿಯೆರಡುದಡಗಳಲಿ ಮೇರೆ ಮೀರಿದ ತೆರದಿ
ತುದಿದಿಹರು ಜನರಲ್ಲಿ ಕಿಕ್ಕಿರಿದು ನಿಂದು
ಇದಿರುಬದಿರಾಗಿ ರೋಮನರು ಶತ್ರುಗಳಿಹರು
ನದಿಯ ಹೊನಲಲ್ಲಿ ಧುಮುಕಲು ವೀರನಂದು! ॥ ೮೩ ॥

ಹಾಕಾರವಿರಲಿಲ್ಲ, ಜಯಕಾರವಿರಲಿಲ್ಲ
ಧೀಕಾರವಿರಲಿಲ್ಲ ತಡಿಯ ಜನರಂದು!
ಆ ಕಡುಗಲಿಯು ಮುಳುಗಿದೆಡೆಯನ್ನೆ ನೋಡುತ್ತ
ಮೂಕಗರ ಪೊಡೆದವರ ಪರಿಯಿದ್ದರಂದು! ॥ ೮೪ ॥

ಮೂಡುಗಡಲಿಂದ ನೇಸರು ಮೂಡಿಬರುವಂತೆ
ಮೂಡಿದನು ಮುಳುಗಿದವನಾಗ ಮೇಲೆಂದು!

ನೋಡಿ ರೋಮನರೆಲ್ಲ ಜಯಘೋಷವಾಡಿದರು
ಮೂಡಿದುದು ಸಂತೋಷವರಿಗಳಿಗು ಬಂದು! ॥ ೮೫ ॥

ಹೊಳೆಯಲ್ಲಿ ನೆರೆಬಂದು ಸುಳಿಸುಳಿದು ನೀರುಕ್ಕಿ
ಗುಳುಗುಳಿಸಿ ಸವ್ವಳಿಸಿ ಬೊಬ್ಬುಳಿಸಿ ಹಾರಿ!
ಸುಳಿಯುತ್ತ ಬೀಳುತ್ತ ಘೂರ್ಮಿಸುತ ಹೊನಲಿತ್ತು!
ಅಳಿದಿತ್ತು ರೋಮನನ ಬಸವಂದು ಹೋರಿ! ॥ ೮೬ ॥

ಪರಿವುಗಳ ಮುರಿವುಗಳ ಸೆಳೆವುಗಳ ಸುಳಿವುಗಳ
ತರತರದ ಶೀಕರದ ಬೆಳ್ನೊರೆಯು ತೋರಿ!
ಭರದಿಂದಲುಲ್ಲೋಲ ಕಲ್ಲೋಲವಾಗುತಿರೆ
ಹರಿದುದಾ ಹೊಳೆಯಂದು ಭೋರ್ಗರೆದು ಭಾರಿ! ॥ ೮೭ ॥

ಹರಿದುದಾ ಹೊಳೆಯಂದು ಭೋರ್ಗರೆದು ಭರದಿಂದ
ಕೊರೆಯುತ್ತಲಿತ್ತಡಿಯ ವೇಗದಿಂ ಮುಂದು!
ಅರಿಗಳಾಕಡೆಯಲ್ಲಿ ಗೆಳೆಯರೀ ತಡಿಯಲ್ಲಿ
ನೆರೆದಿರಲು ಸಲೆಸೈಸಿನಾ ದಿನಗಳಂದು! ॥ ೮೮ ॥

ಹೊನಲಿಗೆ ಹಾರಿದ ಹರೇಶನಿಗೆ—

ನೆತ್ತರಿಡೆವಿಡದೆ ಗಾಯಗಳಿಂದ ಹೊಮ್ಮಿತ್ತು
ಹೊತ್ತಿದ್ದ ಕವಚ ಮಣವೆರಡುವರೆಯಿತ್ತು!
ಸುತ್ತಿ ಸುಳಿಸುಳಿಗಳಲಿ ಒಮ್ಮೆ ಮುಳುಗುತಲಿತ್ತು
ಮತ್ತವನ ಮೊಗವೊಮ್ಮೆ ತೇಲುತ್ತಲಿತ್ತು! ॥ ೮೯ ॥

ಮಗುವೆರಡುಕೈಗಳಿಂ ತಾಯೆದೆಯನಳ್ಕರಿಂ
ಲಗುವಾಗಿ ಹೊಡೆವಂತೆ ಹೊನಲನ್ನು ಹೊಡೆದು!
ತೆಗೆತೆಗೆದು ಕಾಲುಗಳಿನೊತ್ತೊತ್ತಿ ತಳ್ಳುತ್ತ
ಲೊಗುವಿಗೆಯೊಳೀಸುವನು ಗಾಯದುರಿತಡೆದು! ॥ ೯೦ ॥

ತಾಯಿ ನಡುವೊಳು ತರಳನಂ ತಳೆದು ತರುವಂತೆ
ಹಾಯುವಾ ಹೊಳೆಹೊನಲ ತೆರೆಯವನ ಹೊತ್ತು
ಆಯದಿಂ ಪಟ್ಟಣಕೆ ಪದುಳದಿಂ ತಂದಿತ್ತು
ಬೀಯವಾಗದ ದೈವಕೃಪೆಯವನಿಗಿತ್ತು! ॥ ೬೧ ॥

ಮುಳುಗು ನಡೆ ಪಾತಾಳಕೆಂದೊದರಿದನು ಶಕಟ
ನಿಳಿವೊತ್ತಿನೊಳೆ ರೋಮನಗರವನು ನಾವು
ಹಿಡಿಯುತಿದ್ದೆವು ತಡೆಯದಿರುತಿದ್ದೊಡಿವನೆಂದು
ಹಳಿದನವ! ಬಾರದಿವಗಲ್ಲವೇ ಸಾವು! ॥ ೬೨ ॥

ಹರಿಯುವನ ಹೊರೆಯಲೆಂದೆನುತಲಾ ಹರಸೇನ
ಹರಸಿದನು ಕೈಯೆತ್ತಿ ಕಣ್ಣೀರ ಸುರಿಸಿ!
ಇರಬೇಕು ಹುಟ್ಟಿದವನಿಂತು ಶಹಭಾಸು! ಮ
ತ್ಸರವುಂಟೆ ಗುಣಕೆಂದು ಕಂಬನಿಯನೊರಸಿ! ॥ ೬೩ ॥

ಹರೀಶನು ದಡವನ್ನು ಸೇರಿದ ಬಳಿಕ ಪಟ್ಟಣಿಗರಾತನನ್ನು ಅತ್ಯುತ್ಸಾಹ
ದಿಂದಿದಿರುಗೊಂಡು ಗಾಯಗಳನ್ನು ಮದ್ದಿಟ್ಟು ಕಟ್ಟಿ

ಹಿರಿಯವರು ಕಿರಿಯವರು ಗಂಡುಸರು ಹೆಂಗುಸರು
ಹರುಷದಿಂ ಮೈಮರೆಯುತವನ ಬಳಿ ಕೂಡಿ
ವರಜೀವದಾನ ಮಾಡಿದ ತಂದೆ ನಿನಗೆ ಸೊಗ
ಪರಿವರ್ಧಿಸಲಿಯೆಂದು ಹರಸಿದರು ಹಾಡಿ. ॥ ೬೪ ॥

ನಗರದಧಿಕನವನ ಕೊಂಡುಕೊನೆದನು ಬಂದು
ನಗರದಲಿ ವಾದ್ಯಘೋಷದೊಲವನ ಹೊತ್ತು
ನಗುನಗುತ ಹಾಡುತ್ತ ಮೆರವಣಿಗೆ ಮಾಡುತಿರೆ
ಸೊಗದ ಸುಗ್ಗಿಯೆ ಪಟ್ಟಣವೆ ನಲಿಯುತ್ತಿತ್ತು! ॥ ೬೫ ॥

ಬಳಿಕಾ ಹರೀಶನಿಗೆ ಹೊಲವನುಂಬಳಿಯಿತ್ತ
ರಿಳೆಯಲ್ಲಿ ಹೆಸರವನದೆಂದುಳಿಯುವಂತೆ

ತನತನಿಪ ಕಂಚಿನಿಂ ಪ್ರತಿಮೆಯನು ಮಾಡಿಟ್ಟು
ನಿಲಿಸಿದರು ಸರ್ವರೂ ನೆರೆನೋಡುವಂತೆ! ॥ ೯೬ ॥

ಅಲ್ಲಿ ರೋಂನಗರದಲಿ ಎಲ್ಲ ಜನರಿದಿರಿನಲಿ
ನಿಲ್ಲಿಸಿರುವರು ಹರೇಶನ ವಿಗ್ರಹವನು
ಅಲ್ಲಿ ರಣವೇಷದಲಿ ಮೊಣಕಾಲನೊಂದೂರಿ
ಗೆಲ್ಲದವತಾರವೆನೆ ನಿಂದಿರುವನವನು ॥ ೯೭ ॥

ಅದರ ಪೀಠದೆ ಕೆಳಗೆ ಚಿನ್ನದಕ್ಷರಗಳಲಿ
ಉದಿಸಿತೋರುವುದವನ ಶೌರ್ಯವೆದ್ದೆಂದು!
ಮದಗೊಂಡ ಶತ್ರುಗಳ ಸದೆದನವನೆಂತೆಂದು
ಪುದಿದ ಪುಣ್ಯದ ಪಿಂದಿನಾ ಪಗಲೊಳಂದು! ॥ ೯೮ ॥

ಅವನನಿಂದಿಗು ರೋಮನರು ನಿತ್ಯನೆನೆಯುವರು
ನವವನಿತೆಯರು ತಮ್ಮ ಪುತ್ರರವನಂತೆ
ಸುವಿವೇಕ ಧೈರ್ಯಶಾಲಿಗಳಾಗಬೇಕೆಂದು
ಹವಣಿಂದೆ ದೇಗುಲದೆ ಬೇಡುತಿಹರಂತೆ! ॥ ೯೯ ॥

ಎಳಗುವರ ಕುವರಿಯರು ಮಡಿಲ ಮೇಲೇರುತ್ತ
ತಿಳಿಸೆಮಗೆ ಕತೆಯೊಂದನೆಂದಜ್ಜಿಯನ್ನು
ಬಳಸೆ ರೋಂ ನಗರದಲಿ ಹೇಳುತಿಹಳಾ ಮುದುಕಿ
ಕಳೆದ ಶೌರ್ಯದ ಕತೆಯ ಬಣ್ಣಿಸುತಲಿನ್ನೂ! ॥ ೧೦೦ ॥

ಹೊಲಗಳಲಿ ಜೀವನದ ಗತಿದೋರುವೆತ್ತುಗಳಿ
ಗುಲಿಯುವರು ಓಗೊಡುತಲೀ ಕತೆಯನೀಡಿ
ನಲವಿಂದೆ ತೊಟ್ಟಿಲಲಿ ಪಟ್ಟಿರ್ಪ ಶಿಶುಗಳಿಗೆ
ಲಲನೆಯರು ಜೋಗುಳದೆ ಹೇಳುವರು ಹಾಡಿ ॥ ೧೦೧ ॥

ಹೆಗಲಲ್ಲಿ ಕೈಯಿಕ್ಕಿ ಕೆನ್ನೆಗಳ ಜೋಡಿಸುತ
ಜೊಗುಮಿಗೆಯ ನಲ್ಮೆಯಿಂ ತರುಣತರುಣಿಯರು

ಹಗಲಲ್ಲಿ ಜೊನ್ನದಲಿ ಗಾಡಿಯಲಿ ಹಾಡುವರು
ಬಗೆಬಗೆಯ ರಾಗದಲಿ ಕುಣಿದು ತಣಿಯುವರು ॥ ೧೦೨ ॥

ಮದುವೆಯಲಿ ಮುಂಜಿಯಲಿ ಜನರ ಸಂದಣಿಯಲ್ಲಿ
ವಿಧವಿಧದ ವಾದ್ಯದಲಿ ನುಡಿಯಿಸುವರಿಂದು!
ಮುದಗೊಂಡು ನಸುನಗುತ ದುಃಖಾಶ್ರುಸುರಿಸುತ್ತ
ಸದೆದನವನರಿಗಳನು ಧೈರ್ಯದಿಂತೆಂದು! ॥ ೧೦೩ ॥

ಕಾಡಿನಲಿ ಸುಳಿಯುತ್ತ ಬೇಟೆಗಾರರ ಬಳಗ
ರೂಢಿಸಿದ ಗಿಡಬಳ್ಳಿಮರಹೊದರಿಗಿಂದು!
ಹಾಡುವುದು ದೇಶಭಕ್ತಿಯ ಪರಿಯ ಬಿತ್ತರಿಸಿ
ನೋಡಿದಿರೆ ಮಿಗಿಲಾವುದಿದಕುಂಟು ಎಂದು! ॥ ೧೦೪ ॥

* * *

ಪಡುವಣರ ಕತೆಯನೊಲಿದೇಕೆ ಹಾಡಿದನೆಂದು
ಕಡೆಗಣಿಸಿ ಹಳಿಯದಿರಿ ಬಂದಂತೆ ಮನಕೆ
ಪಡುವಣರೊ ಬಡಗಣರೊ ಮೂಡಣರೊ ತೆಂಕಣರೊ
ನುಡಿವೆನಾರಾದೊಡೇಂ ಮತ್ಸರವೆ ಗುಣಕೆ? ॥ ೧೦೫ ॥

ಎಲ್ಲಿಹುದು ಒಕ್ಕಟ್ಟು, ಎಲ್ಲಿಹುದು ಸಹಕಾರ,
ಎಲ್ಲಿಹುದು ಸ್ವಾತಂತ್ರ್ಯ ಎಲ್ಲಿ ಜನ ಸಬಲಂ
ಎಲ್ಲಿಹುದು ದೇಶಾಭಿಮಾನ ಸೆಮ್ಮದಿ ಅಲ್ಲಿ!
ಅಲ್ಲೆ ನಿಜ! ಭದ್ರಂ ಶುಭಂ ಮಂಗಲಂ. ॥ ೧೦೬ ॥

* * *

ತಿದ್ದುಪಡಿ

20ನೆಯ ಪುಟ

ದ್ಯ	ಹಂತಿ	ತಪ್ಪು	ಒಪ್ಪು
೩	೩	ಹುಟ್ಟಿದವನಿಂರು	ಹುಟ್ಟಿಡವನಿಂತು
೪	೩	ಜೀವಡಾನ	ಜೀವದಾನ
೫	೨	ಘೋಷದೊಲವನ	ಘೋಷದೊಳವನ
,,	೪	ಸುಗ್ಗೆಯೆ	ಸುಗ್ಗಿಯೆ
೬	೧	ಯಿಾತ್ತ	ಯಿತ್ತ

ಈ ಲೇಖಕನ ಇತರ ಕೃತಿಗಳು:

೧. ನೀತಿಮುಕ್ತಾಹಾರ (ಶತಕ)

೨. ಸಣ್ಣ ಹಾಡುಗಳು